ಅಧ್ಯಕ್ಷರು : ಇಲ್ಲ, ಸರ್ಕಾರದವರು ಒಂದು ವಾರದ ಕಾಲಾವಕಾಶ ತೆಗೆದುಕೊಂಡಿದ್ದಾರೆ. ಈ ಅಧಿವೇಶನದಲ್ಲೇ ಉತ್ತರ ಕೊಡುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ : ಮುಖ್ಯಮಂತ್ರಿಗಳು ಉತ್ತರ ನೀಡಲು ತಯಾರಿದ್ದಾರೆ. ಆದರೆ ಅಧಿಕಾರಿಗಳು ಏಕೆ ಇದಕ್ಕೆ ಟೈಂ ತೆಗೆದುಕೊಂಡರೋ ನನಗೆ ಗೊತ್ತಾಗಲಿಲ್ಲ. ಇದು ಬಹಳ ಮಹತ್ವವಾದುದು. ಇದನ್ನು ಮುಂದಿನ ಸೋಮವಾರದ ದಿವಸ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಆಯಿತು. ಈಗ ಮುಂದಿನ ಪ್ರಶ್ನೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ರೈತರ ಜಮೀನುಗಳಿಗೆ ಪರಿಹಾರ

26 (463) : ಶ್ರೀ ಜೆ. ನರಸಿಂಹ ಸ್ವಾಮಿ (ದೊಡ್ಡಬಳ್ಳಾಪುರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ರೈತರ ಜಮೀನುಗಳನ್ನು ನಿವೇಶನಕ್ಕಾಗಿ ಸ್ವಾಧೀನಪಡಿಸಿಕೊಂಡಾಗ ಅವರುಗಳಿಗೆ ನೀಡುವ ಪರಿಹಾರದ ಹಣವೆಷ್ಟು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ತನ್ನ ಯೋಜನೆಗಳಿಗೆ ಭೂಸ್ವಾಧೀನಪಡಿಸಿಕೊಳ್ಳುವ ಜಮೀನುಗಳಿಗೆ ಭೂಸ್ವಾಧೀನಪಡಿಸಿಕೊಳ್ಳುವ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ 1894, ಕಲಂ 11ರನ್ವಯ ಭೂಪರಿಹಾರವನ್ನು ನಿಗದಿಪಡಿಸಿ ಪಾವತಿಸಲಾಗುತ್ತಿದೆ. ಈ ರೀತಿ ನಿಗದಿಪಡಿಸುವ ಭೂ ಪರಿಹಾರದಲ್ಲಿ ಪ್ರಾರಂಭಿಕ ಅಧಿಸೂಚನೆಯ ಸಮಯದಲ್ಲಿನ ಹಿಂದಿನ 3 ವರ್ಷಗಳ ಮಾರುಕಟ್ಟೆಯ ಸರಾಸರಿ ದರವನ್ನು ಪರಿಗಣಿಸಿ ನಿಗದಿಪಡಿಸಿದ ಭೂಮಿಯ ಬೆಲೆ, 30% ಸೊಲೇಷಿಯಂ ಮತ್ತು ಪ್ರಾರಂಭಿಕ ಅಧಿಸೂಚನೆಯ ದಿನಾಂಕದಿಂದ ಐತೀರ್ಪು ರಚಿಸುವವರೆಗೆ ಅಥವಾ ಭೂಸ್ವಾಧೀನ ಪಡೆಯುವ ಅವಧಿಯವರೆಗೆ 12% ಹೆಚ್ಚುವರಿ ಮಾರುಕಟ್ಟೆಯ ಬೆಲೆಯು ಒಳಗೊಂಡಿರುತ್ತದೆ ಹಾಗೂ ಪ್ರೋತ್ಸಾಹದಾಯಕ ಯೋಜನೆಯಡಿ 40–60ರ ಒಂದು ನಿವೇಶನವನ್ನೂ ಗರಿಷ್ಠ 10 ನಿವೇಶನಗಳಿಗೆ ಸೀಮಿತಗೊಳಿಸಿ, ಶೇಕಡ 25ರ ಹಂಚಿಕೆ ದರವನ್ನು ಪಾವತಿಸಿಕೊಂಡು ನೀಡಲಾಗುತ್ತಿದೆ.

ಶ್ರೀ ಜೆ. ನರಸಿಂಹಸ್ವಾಮಿ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಭೂಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಕೊಡುವ ಪರಿಹಾರ ಹಣವೆಷ್ಟು ಎಂದು ಕೇಳಿದ್ದೇವೆ. ಅದಕ್ಕೆ ಉತ್ತರವಾಗಿ, ಮೂರು ವರ್ಷಗಳ ಮಾರುಕಟ್ಟೆಯ ಸರಾಸರಿ ದರದ ಮೇಲೆ ಶೇಕಡ 30ರಷ್ಟು ಹೆಚ್ಚಿಗೆ ಫಿಕ್ಸ್ ಮಾಡಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಅಧಿಕಾರಿಗಳು ಬಹಳ ಅವೈಜ್ಞಾನಿಕವಾಗಿ ಬೆಲೆ ನಿಗದಿ ಮಾಡುತ್ತಿದ್ದಾರೆಂದು ನಾವು ಭಾವಿಸಿದ್ದೇವೆ. ಇವತ್ತು ಅಲ್ಲಿ ಒಂದು ರೂಪಾಯಿ ರೇಟ್ ಇದ್ದರೆ, ಭೂಮಿ ಕಳೆದುಕೊಂಡಂಥ ರೈತರಿಗೆ ಬಿ ಡಿ ಎ ನವರು ಇಪ್ಪತ್ತು ಪೈಸೆಯಷ್ಟು ರೇಟನ್ನು ಕೊಡುತ್ತಿದ್ದಾರೆ. ಜಮೀನು ಕಳೆದುಕೊಂಡಂಥ ಸಂಪಿಗೆಹಳ್ಳಿಯ ರೈತ ಪಕ್ಕದ ದೇವನಹಳ್ಳಿಗೆ ಹೋಗಬೇಕಾಗುತ್ತದೆ. ದೇವನಹಳ್ಳಿಯಲ್ಲಿ ಇವತ್ತು ಒಂದು ಎಕರೆಗೆ ಒಂದು ಕೋಟಿ ರೂಪಾಯಿ ಬೆಲೆಯಾಗಿದೆ. ದೊಡ್ಡಬಳ್ಳಾಪುರಕ್ಕೆ ಹೋದರೆ, ಅಲ್ಲಿ ಒಂದು ಎಕರೆಗೆ ಇಪ್ಪತ್ತು ಲಕ್ಷ ರೂಪಾಯಿ ಆಗಿದೆ. ನೂರಾರು ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದಂಥ ರೈತರು ಇವತ್ತು ಜಮೀನನ್ನು ಕಳೆದುಕೊಂಡಿದ್ದಾರೆ. ಆದ್ದರಿಂದ, ಈಗ ಕೊಡುತ್ತಿರುವ ದರವನ್ನು ಪುನರ್

ಪರಿಶೀಲನೆ ಮಾಡಿ ಕನಿಷ್ಟವೆಂದರೆ ಅರ್ಧದಷ್ಟು ಅಂದರೆ ಅಲ್ಲಿ ಒಂದು ರೂಪಾಯಿ ಬೆಲೆ ಇದ್ದರೆ, ಅದಕ್ಕೆ 50 ಪೈಸೆಯಷ್ಟು ಬೆಲೆಯಾದರೂ ರೈತರಿಗೆ ಸಿಗುವಂತೆ ಆಗಬೇಕು ಎಂದು ಅಧ್ಯಕ್ಷರ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಈಗಾಗಲೇ ಅರ್ಕಾವತಿ ಬಡಾವಣೆಗೆ ಮತ್ತು ಬೇರೆ ಕಡೆಗಳಲ್ಲಿ ಜಮೀನು ತೆಗೆದುಕೊಳ್ಳುತ್ತಿದ್ದು, ಹಾಗೆ ತೆಗೆದುಕೊಳ್ಳತಕ್ಕಂಥ ಸಮಯದಲ್ಲಿ ಹಿಂದಿನ ಮೂರು ವರ್ಷಗಳ ಸರಾಸರಿ ಮಾರುಕಟ್ಟೆ ಬೆಲೆ, ಶೇಕಡಾ 30 ರಷ್ಟು ಸೊಲೇಷಿಯಂ ಮತ್ತು ಭೂಸ್ವಾಧೀನ ಪಡೆಯುವವರೆಗೆ ಶೇಕಡಾ 12ರಷ್ಟು ಹೆಚ್ಚುವರಿ ಮಾರುಕಟ್ಟೆ ಬೆಲೆ ಹಾಗೂ ಪ್ರೋತ್ಸಾಹಕ ಯೋಜನೆಯಡಿ ಎಕರೆ ಒಂದಕ್ಕೆ 40X60 ಅಳತೆಯ ಒಂದು ನಿವೇಶನ ಕೊಡಲಾಗುತ್ತಿದೆ. ಭೂಮಿ ಭಾಗಾಯತು ಜಮೀನಾಗಿದ್ದರೆ, ಎಕರೆಗೆ ಹೆಚ್ಚುವರಿ ಒಂದು ಲಕ್ಷ ರೂಪಾಯಿ ಮತ್ತು ಶೇಕಡಾ 30ರಷ್ಟು ಸೊಲೇಷಿಯಂ ಹಾಗೂ ಶೇಕಡಾ 12ರಷ್ಟು ಹೆಚ್ಚುವರಿ ದರವನ್ನು ನೀಡಲಾಗುತ್ತಿದೆ. ಆರ್ಕಿಡ್ ಗೈಡೆನ್ಸ್ ಏನಿದೆ, ಅದಕ್ಕಿಂತಲೂ ಹೆಚ್ಚಿನ ಹಣವನ್ನು ಕೊಡತಕ್ಕಂಥಾದ್ದನ್ನು ನಾವು ಮಾಡಿದ್ದೇವೆ. ಈಗಾಗಲೇ, ಅರ್ಕಾವತಿ ಬಡಾವಣೆಗೆ ಭೂಸ್ವಾಧೀನ ಮಾಡಿಕೊಂಡಿರುವ ಜಮೀನುಗಳಿಗೆ ಒಂದು ಎಕರೆಗೆ 11 ಲಕ್ಷ ರೂಪಾಯಿಗಳಿಂದ ಹಿಡಿದು 20 ಲಕ್ಷ ರೂಪಾಯಿಗಳವರೆಗೆ ನಾವು ಹಣವನ್ನು ಕೊಟ್ಟಿದ್ದೇವೆ. ಆ ಜಮೀನಿಗೆ ಹೆಚ್ಚಿನ ಬೆಲೆ ಇದೆ ಎನ್ನುವುದು ನಮಗೆ ಗೊತ್ತು. ಅದಕ್ಕಾಗಿಯೇ, ಅವರಿಗೆ ತೊಂದರೆಯಾಗಬಾರದು ಎನ್ನುವ ರೀತಿಯಲ್ಲಿ, ಕಾನೂನು, ಮಾರ್ಕೆಟ್ ವ್ಯಾಲ್ಯು ಮತ್ತು ಹೆಚ್ಚುವರಿ ಹಣವನ್ನು ಕೊಡತಕ್ಕಂಥಾದ್ದನ್ನು ಮಾಡಿದ್ದೇವೆ. ಈಗಾಗಲೇ ಒಂದು ಎಕರೆಗೆ 11 ಲಕ್ಷ ರೂಪಾಯಿಗಳಿಂದ ಹಿಡಿದು 20 ಲಕ್ಷ ರೂಪಾಯಿಗಳವರೆಗೆ ಕೊಟ್ಟಿದ್ದೇವೆ.

ಕಾರಾಗೃಹ ಕೈದಿಗಳಿಗೆ ಸೌಕರ್ಯ ಒದಗಿಸುವುದು

27 (449) : ಶ್ರೀ ಪಾಟೀಲ್ ಬಿ.ಸಿ (ಹಿರೇಕೆರೂರು) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ರಾಜ್ಯದ ನಾನಾ ಕಾರಾಗೃಹಗಳಲ್ಲಿರುವ ಕೈದಿಗಳಿಗೆ ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಲಾಗುತ್ತಿದೆಯೇ

2) ಕೈದಿಗಳಿಗೆ ವಿತರಿಸುತ್ತಿರುವ ಆಹಾರ ಧಾನ್ಯಗಳು ಹಾಗೂ ನಿಗದಿಪಡಿಸಿದ ಆಹಾರ ಸರಿಯಾಗಿ ಕೈದಿಗಳಿಗೆ ತಲುಪುತ್ತಿದೆಯೇ (ವಿವರ ನೀಡುವುದು) ತಲುಪದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

1) –ಹೌದು–

2) –ಹೌದು– ವಿವರ ಅನುಬಂಧದಲ್ಲಿ ನೀಡಿದೆ.